ಶ್ರೀ ಪಾಟಾಳ್ ನಾಗರಾಜ್.—ತಮ್ಮ ತೀರ್ಮಾನವನ್ನು ನಾವು ವಿರೋಧ ಮಾಡುವುದಿಲ್ಲ, ಆದರೆ ಸರ್ಕಾರದ ಪುರ್ಗಾಪಣ ನೀತಿಯನ್ನು ವಿರೋಧಿಸಿ, ಸಭಾತ್ಯಾಗ ಮಾಡುತ್ತೇನೆ.

(ಮೂನ್ಯ ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

MADAM DEPUTY SPEAKER.—Now I adjourn the House for lunch and meet at 2-00 P. M.

*(The House adjourned at Five Minutes past One of the Clock to meet at 2-00 p.m.)*

(ಸದನವು ಪುನಃ ೨ ಗಂಟೆ ೦೭ ನಿಮಿಷಕ್ಕೆ ಸಮಾವೇಶಗೊಂಡಿತು)

ಉಪಾಧ್ಯಕ್ಷಿಣಿಯವರು (ಶ್ರೀಮತಿ ನಾಗಮ್ಮ ಕೇಶವಮೂರ್ತಿ) ಪೀಠವನ್ನಲಂಕರಿಸಿದರು.

ಶ್ರೀ ಹೆಚ್. ಏಕಾಂತಯ್ಯ.—ನಾನು ಬೆಳಿಗ್ಗೆ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದೆ. ಇವತ್ತಿನ ದಿವಸ ಹಲವಾರು ಬೇಡಿಕೆಗಳ ಮೇಲೆ ಚರ್ಚೆ ಇದೆ. ದುರಾದೃಷ್ಟ ವಶಾತ್ ಈ ಬೇಡಿಕೆಗಳು ಏನಿವೆ ಈ ಬೇಡಿಕೆಗಳಿಗೆ ಸಂಬಂಧಪಟ್ಟ ಇಲಾಖೆಗಳಿಂದ ಸರ್ಕಾರದವರು ಈ ವರ್ಷದ ವಾರ್ಷಿಕ ವರದಿಗಳನ್ನು ಇಲ್ಲಿಯವರೆಗೆ ನಮಗೆ ಕೊಟ್ಟಿಲ್ಲ. ಕೇವಲ ಒಂದೇ ಒಂದು ವರದಿಯನ್ನು ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯವರು ಇವತ್ತು ಬೆಳಿಗ್ಗೆ ಕೊಟ್ಟಿದ್ದಾರೆ. ತದನಂತರ ಕೃಷಿ ಇಲಾಖೆಯವರು ಇಂಗ್ಲೀಷ್‌ನಲ್ಲಿ ವರದಿ ಅಚ್ಚು ಹಾಕಿಸಿ ಕೊಟ್ಟಿದ್ದಾರೆ, ಹೀಗಿರುವಾಗ ಯಾವ ಆಧಾರದ ಮೇಲೆ ನಾವು ಬೇಡಿಕೆಗಳನ್ನು ಚರ್ಚೆ ಮಾಡಬೇಕೆಂದು ತಾವು ಹೇಳಬೇಕು, ಎಲ್ಲಿಯವರೆಗೆ ವಾರ್ಷಿಕ ವರದಿಗಳನ್ನು ಸಕಾಲದಲ್ಲಿ ಸರ್ಕಾರದವರು ಕೊಡಲಿಕ್ಕೆ ಸಾಧ್ಯವಿಲ್ಲ ಅಲ್ಲಿಯವರೆಗೆ ತಾವು ಚರ್ಚೆಯನ್ನು ಮುಂದಕ್ಕೆ ಹಾಕಬೇಕು.

(ಗೊಂದಲ)

ಆದರ ಜೊತೆಯಲ್ಲಿ ಕಾರ್ಯ ನಿರ್ವಹಣೆಯ ಬಜೆಟ್, ಫರ್‌ಫಾರ್ಮೆನ್ಸ್ ಬಜೆಟ್ ಮತ್ತು ಆನ್ಯುಯಲ್ ರೀಪೋರ್ಟ್ಸ್ ಕೊಡದೆ ಇದ್ದ ಸಂದರ್ಭದಲ್ಲಿ ಬೇಡಿಕೆಗಳ ಮೇಲೆ ಚರ್ಚೆ ಮಾಡಲು ಸಾಧ್ಯವಿಲ್ಲ. ಸರ್ಕಾರದವರು ಸರಿಯಾದ ಉತ್ತರವನ್ನು ತರಿಸಿಕೊಡಬೇಕು. ವರದಿಯನ್ನು ಕೊಟ್ಟ ಮೇಲೆ ಚರ್ಚೆಯನ್ನು ತೆಗೆದುಕೊಳ್ಳಬೇಕೇ ಹೊರತು ಆದರ ಮೊದಲು ತಾವು ತೆಗೆದುಕೊಳ್ಳಬಾರದು.

† ಶ್ರೀ ಪಾಟಾಳ್ ನಾಗರಾಜ್ (ಚಾಮರಾಜನಗರ). — ಬೆಳಿಗ್ಗೆ ಸಭೆ ಪ್ರಾರಂಭವಾದಾಗ ನಾನಂ ತಮ್ಮ ಗಮನಕ್ಕೆ ತಂದೆ. ಹಿಂದಿನ ಸಾಲಿನಲ್ಲಿ ಸಭೆಯು ನಡವಳಿಕೆ ಮತ್ತು ರಾಜ್ಯದ ನೀತಿ ಏನಿದೆ ಎಂದರೆ ಕನ್ನಡದಲ್ಲಿ ಆಡಳಿತ ನಡೆಸಬೇಕೆಂಬುದು ಸರ್ಕಾರದ ನಿಲುವು ಮತ್ತು ನೀತಿ. ಆದರೆ ಅದಕ್ಕೆ ತದ್ವಿರುದ್ಧವಾಗಿ ಪ್ರತಿಯೊಂದು ಪಂಚಾಯಿತಿಯಿಂದ ಹಿಡಿದು ಶಾಸಕಾಂಗದ ಕಾರ್ಯಾಲಯದವರೆಗೆ ನಡೆಯುತ್ತಿದೆ. ನಾನು ಕನ್ನಡದಲ್ಲಿ ಕಳುಹಿಸಿದರೆ, ಅವರು ಇಂಗ್ಲೀಷ್‌ನಲ್ಲಿ ಉತ್ತರ ಬರೆಯುತ್ತಾರೆ. ಇವತ್ತು ಮೀನೆಂಗಾರಿಕೆ ಇಲಾಖೆಯವರು ಒಂದು ವರದಿಯನ್ನು (ರ್ಯ-೯೦ರದ್ದು) ಕಳುಹಿಸಿದ್ದಾರೆ. ಅದೂ ಇಂಗ್ಲೀಷ್‌ನಲ್ಲಿದೆ. ಸರ್ಕಾರದಿಂದ ಬರತಕ್ಕ ಪತ್ರಗಳು ಪುಸ್ತಕಗಳೂ, ವಿವಿಧ ಇಲಾಖೆಗಳಿಂದ ಬರತಕ್ಕ ವರದಿಗಳೂ ಎಲ್ಲವೂ ಸಮಗ್ರವಾಗಿ ಇಂಗ್ಲೀಷಮ್ಮು ಬಿಟ್ಟು ಕನ್ನಡ ಭಾಷೆಯಲ್ಲಿ ಇಲ್ಲ. ಶೇಕಡ ಒಂದೂ ಭಾಗ ಮಾತ್ರ ಕನ್ನಡದಲ್ಲಿ ಸರ್ಕಾರದ ಆಡಳಿತವನ್ನು ನಡೆಸುತ್ತಿದ್ದಾರೆ. ಸರ್ಕಾರದಲ್ಲಿರತಕ್ಕ